ಶ್ರೀ ಜೆ. ಎಲ್. ಕಬಾಡೆ.—ವಿಜಾಪುರ ಮತ್ತು ಇಂಡಿ ತಾಲ್ಲೂಕಿನ ವತನದಾರ ಕುಲಕರ್ಣಿಗಳು 10 ವರ್ಷಗಳಿಗೂ ಕಡಿಮೆ ಸೇವೆ ಸಲ್ಲಿಸಿದರೆಂಬ ಆಧಾರದ ಮೇಲೆ ಅವರ ನಿವೃತ್ತಿ ವಯಸ್ಸಿನ ವಿಶ್ರಾಂತಿ ವೇತನದ ಸೌಲಭ್ಯವನ್ನು ನೀಡದಿರುವುದು ನಿಜವೇ ಎಂದು ಕೇಳಿದ್ದಕ್ಕೆ, ನಿಜ ಎಂದು ಹೇಳಿದ್ದೀರಿ, ರಾಜ್ಯದ ಸಿವಿಲ್ ಸರ್ವೀಸ್ ರೂಲ್ಸ್‌ನಲ್ಲಿ ಈ ನಿಯಮಾವಳಿ ಮತ್ತು ಇವರ ಬಗ್ಗೆ ಕನಿಷ್ಟವೇತನವನ್ನು ಅಳವಡಿಸಲಾಗಿದೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಿವಿಲ್ ಸರ್ವೀಸ್ ರೂಲ್ಸ್‌ನಲ್ಲಿ ನ್ಪಷ್ಟವಾಗಿದೆ. ವಿಶ್ರಾಂತಿ ನೇತನ ಪಡೆಯಬೇಕಾದರೆ, ಕನಿಷ್ಟಪಕ್ಷ 10 ವರ್ಷ ಕೆಲಸ ಮಾಡಲೇಬೇಕು.

ಶ್ರೀ ಜೆ. ಎಲ್. ಕಬಾಡೆ.—ವತನದಾರ ಕುಲಕರ್ಣಿಗಳಾಗಿರುವವರೆಲ್ಲರಿಗೂ ಇದು ಅನ್ವಯಿಸುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ. - ಹೌದು, ಅವರೆಲ್ಲರಿಗೂ ಅನ್ವಯಿಸುತ್ತದೆ.

ಶ್ರೀ ಜೆ. ಎಲ್. ಕಬಾಡೆ.—ಅಂಥ ಸೌಲಭ್ಯಗಳನ್ನು ಪಡೆದಿರುವ ವತನದಾರ ಕುಲಕರ್ಣಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಎರಡು ಎಂದು ಹೇಳಿದ್ದೀರಾ ! ಇವೆರಡೂ ಒಂದೇ ತಾಲ್ಲೂಕಿಗೆ ಸೇರಿವೆಯೋ ಅಥವಾ ಬೇರೆ ಬೇರೆ ತಾಲ್ಲೂಕುಗಳಿಗೆ ಸೇರಿವೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.- ಒಬ್ಬರು ಎಸ್. ಬಿ. ಕುಲಕರ್ಣಿ, ಬಿಜಾಪುರ ತಾಲ್ಲೂಕಿನ ಕೇಡ್ಡಿಯವರು. ಬಿ. ಬಿ. ಕುಲಕರ್ಣಿ ಇಂಡಿ ತಾಲ್ಲೂಕಿನ ಊರಿನವರು.

ಶ್ರೀ ಜೆ. ಎಲ್. ಕಬಾಡೆ.—ಸರ್ವೀಸ್ ಮಾಡತಕ್ಕಂಥ ಕಾಲದಲ್ಲಿ ಕುಲಕರ್ಣಿ ಎನ್ನುವವರಿಗೆ ರಜಾ ನೀಡದೆ ಇರುವುದಕ್ಕೆ ಕಾರಣ ಏನು ? ಇದನ್ನು ವಿಚಾರಮಾಡಿ ಆಗಿರತಕ್ಕ ಅನ್ಯಾಯವನ್ನು ನರಿಪಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—15 ದಿವಸ ಆಗಿರಬಹುದು, 10 ದಿವಸ ಆಗಿರಬಹುದು, ಆ ರೀತಿ ಬದಲಾವಣೆ ಮಾಡಬೇಕಾದರೆ ನಿಯಮ ಏನೀರಿದ ಹಾಗೆ ಆಗುತ್ತದೆ. ಇಷ್ಟು ದಿವಸ ಮಿತಿ ಎಂದು ತೀರ್ಮಾನ ಮಾಡುವುದಕ್ಕೆ ಕಷ್ಟ.

Percentage of S.S.L.C. results

(115) SRI T.R. SHAMANNA (Fort).—Will the Minister for Education be pleased to state .—

(*a*) the number of male and female students that appeared for S.S.L.C. Examination during the past 3 years (April and October Examination) in Bangalore Corporation area ;

(*b*) the percentage of results in respect of students sent up by—

(i) Government Schools

(ii) Corporation Schools and

(iii) Private Institutions ;

(*c*) the steps taken by Government to improve the standards in respect of Schools where the percentage of passes is very low ?

---

† Asterisks indicate that remarks or speaches have not been revised by the member concerned

SRI M. MALLIKARJUNA SWAMY (Minister for Education).—

(*a*) Number of male and female students are as follows.—

Year		Male	Famale
April 1973	...	9,344	6,917
April 1974	...	10,341	7,608
April 1975	...	10,594	7,897
October 1973	...	7,420	4,637
October 1974	...	7,305	4,626
October 1975	...	7,239	4,279

(*b*)

	1972-73	1973-74	1974-75
(i) Government High Schools ...	16.0	18.4	21.5
(ii) Private High Schools ...	52.4	55.3	63.6
(iii) Corporation High Schools ...	13.7	14.8	20.8

(*c*) Steps taken are.—

(1) providing Special Coaching to the students of weaker sections of the Society.

(2) Starting of book banks to help the students.

(3) By providing nutritious food to the students.

(4) By providing training courses and guidance to the Teachers'

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ತಾವು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದವರು; ಸರ್ಕಾರಿ ಶಾಲೆಗಳಲ್ಲಿ ಶೇ. 18, ಖಾಸಗೀ ಶಾಲೆಗಳಲ್ಲಿ ಶೇ. 57, ಮತ್ತು ಕಾರ್ಪೊರೇಷನ್ ಶಾಲೆಗಳಲ್ಲಿ ಶೇ. 16 ಎಂದು ಇದೆ. ಖಾಸಗೀ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬಂದೂ, ಸರ್ಕಾರಿ ಮತ್ತು ಕಾರ್ಪೊರೇಷನ್ ಶಾಲೆಗಳಲ್ಲಿ ಕಡಿಮೆ ಫಲಿತಾಂಶ ಬರುವುದಕ್ಕೆ ಕಾರಣ ಏನು ? ಕಾರ್ಪೊರೇಷನ್ ಮತ್ತು ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಹೆಚ್ಚಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರಿಗೆ ತಿಳಿದ ಹಾಗೆ ಸರ್ಕಾರಿ ಮತ್ತು ಕಾರ್ಪೊರೇಷನ್ ಹೈಸ್ಕೂಲುಗಳಿಗೆ ಪಟ್ಟಣದಲ್ಲಿ ಪಾಸಮಾಡತಕ್ಕ ಬಡವರು ಮತ್ತು ದುರ್ಬಲ ವರ್ಗದ ಮಕ್ಕಳೇ ಪಾಸ್ಸಿ ಬರತಕ್ಕವರು. ಆದುದರಿಂದಲೇ ಉತ್ತೀರ್ಣತೆಯಲ್ಲಿ ಪ್ರಥಮ ಸ್ಥಾನ ಖಾಸಗೀ ಶಾಲೆಗಳಿಗೂ, ಎರಡನೇ ಸ್ಥಾನ ಸರ್ಕಾರಿ ಶಾಲೆಗಳಿಗೂ, ಮೂರನೇ ಸ್ಥಾನ ಕಾರ್ಪೊರೇಷನ್ ಶಾಲೆಗಳಿಗೂ ಇದೆ. ಈಗಾಗಲೇ ಉತ್ತರದಲ್ಲಿ ಹೇಳಿರುವ ಹಾಗೆ ಉತ್ತಮ ಫಲಿತಾಂಶ ಬರಬೇಕೆನ್ನುವ ದೃಷ್ಟಿಯಿಂದ ಈಗಾಗಲೇ ಕ್ರಮ ತೆಗೆದುಕೊಂಡಿದ್ದು, ಆ ಸಂಬಂಧವಾಗಿ ವಿದ್ಯಾರ್ಥಿಗಳಿಗೆ ಬುಕ್ ಬ್ಯಾಂಕ್‌ಗಳನ್ನು ಸ್ಥಾಪಿಸುವುದು, ಪೌಷ್ಟಿಕ ಆಹಾರವನ್ನು ಒದಗಿಸುವುದೂ, ಉಪಾಧ್ಯಾಯರಿಗೆ ಸರಬೇತಿ ಮತ್ತು ಮಾರ್ಗದರ್ಶನದ ಸೌಲಭ್ಯವನ್ನು ಒದಗಿಸುವುದೂ, ದುರ್ಬಲವರ್ಗದ ವಿದ್ಯಾರ್ಥಿಗಳಿಗೆ ವಿಶೇಷ ವ್ಯಾಸಂಗದ ಸೌಲಭ್ಯವನ್ನು ಕೂಡ ಒದಗಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಖಾಸಗೀ ಶಾಲೆಗಳಲ್ಲಿ ಫಲತಾಂಶ ಉತ್ತಮವಾಗಿ ಬರುತ್ತಿದೆ. ಸರ್ಕಾರಿ ಮತ್ತು ಕಾರ್ಪೊರೇಷನ್ ಸ್ಕೂಲ್‌ಗಳಲ್ಲಿ ಇರತಕ್ಕಂಥ ಉಪಾಧ್ಯಾಯರುಗಳು ಶ್ರದ್ಧೆವಹಿಸಿ ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಅಂಥ ಉಪಾಧ್ಯಾಯರುಗಳಿಗೆ ವರ್ಗ ಕೊಡುತ್ತಿದ್ದೇವೆ. ಮತ್ತೂ ಅವರ ಮೇಲೆ ಇನ್ನು ಏನಾದರೂ ಕ್ರಮ ತೆಗೆದುಕೊಳ್ಳುವುದು ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಎಂ. ಮುಂಜುನಾಥ್.—ಸ್ವಾಮಿ, ಖಾಸಗೀ ಶಾಲೆಯಲ್ಲಿರತಕ್ಕ ಉಪಾಧ್ಯಾಯರುಗಳು ವಿದ್ಯಾಸಂಸ್ಥೆಗಳಿಗೆ ಒಳ್ಳೆಯ ಹೆಸರು ಬರಲಿ ಎನ್ನುವ ದೃಷ್ಟಿಯಿಂದಲೂ, ಆಲ್ಲದೇ ಖಾಸಗೀ ಶಾಲೆಗಳಲ್ಲಿ ಪೈಪೋಟಿ ಇದ್ದು, ನನ್ನ ಸಂಸ್ಥೆಗೆ ಒಳ್ಳೆಯ ಫಲತಾಂಶ ಬರಲಿ ಎಂದು ಆಸಕ್ತಿ ವಹಿಸಿ ಕೆಲಸ ಮಾಡುತ್ತಾರೆ. ಖಾಸಗೀ ಶಾಲೆಗಳಲ್ಲೂ ಕೂಡ ಎಲ್ಲಾ ವರ್ಗದ ವಿದ್ಯಾರ್ಥಿಗಳೂ ಬರುತ್ತಾರೆ. ಅದೇ ರೀತಿ ಸರ್ಕಾರಿ ಪಾಠಶಾಲೆಗಳಲ್ಲಿಯೂ ಶ್ರಮವಹಿಸಿ ಕೆಲಸ ಮಾಡುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸರ್ಕಾರಿ ಮತ್ತು ಕಾರ್ಪೊರೇಷನ್ ಶಾಲೆಗಳಿಗೆ ಬಡವರ ಮಕ್ಕಳೇ ಬರತಕ್ಕಂಥವರು ಎಂದು ಹೇಳಿದ ಮೇಲೆ ಅರ್ಥ ಮಾಡಿಕೊಳ್ಳಬೇಕು. ಖಾಸಗೀ ಶಾಲೆಗಳಲ್ಲಿ ಸೇರಿ, ಅಲ್ಲಿ ತಿರಸ್ಕೃತರಾದ ವಿದ್ಯಾರ್ಥಿಗಳೇ ಇಲ್ಲಿಗೆ ಬರುವುದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸ್ವಾಮಿ, ಸರ್ಕಾರೀ ಪ್ರೌಢಶಾಲೆಗಳಲ್ಲಿ ಮತ್ತು ನಗರಸಭಾ ಪ್ರೌಢಶಾಲೆಗಳಲ್ಲಿ ಗುಣಮಟ್ಟ ಇಳಿಯುವುದಕ್ಕೆ ಪ್ರಧಾನವಾದ ಕಾರಣ ಏನೆಂದರೆ ಸಕಾಲದಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡದೇ ಇರತಕ್ಕಂಥಾದ್ದು ಮತ್ತು ಖಾಲಿಯಾದಂಥ ಸ್ಥಳಕ್ಕೆ ಭರ್ತಿಮಾಡದೇ ಇರತಕ್ಕಂಥಾದ್ದು ಮತ್ತು ಆ ಶಾಲೆಗೆ ಸರಿಯಾದಂಥಾ ಪೀಠೋಪಕರಣಗಳನ್ನು ಕೊಡದೇ ಇರತಕ್ಕಂಥಾದ್ದು ಮತ್ತು ಇದಕ್ಕಿಂತಲೂ ಮುಖ್ಯವಾಗಿ ಆ ಶಾಲೆಗಳಲ್ಲಿ ಕಟ್ಟುನಿಟ್ಟಾದ ನಿಯಮಾವಳಿಗಳನ್ನು ಪಾಲಿಸದೇ ಇರತಕ್ಕಂಥಾದ್ದು ಇದು ಕಾರಣವಲ್ಲವೇ ಸ್ವಾಮಿ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸ್ವಲ್ಪ ಮಟ್ಟಿಗೆ ಇದ್ದರೂ ಇರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಇದರಲ್ಲಿ ನೋಡಿದರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಫಲತಾಂಶ ಹೆಚ್ಚಿದೆ, ಖಾಸಗೀ ಪ್ರೌಢಶಾಲೆಗಳಲ್ಲಿ ಫಲತಾಂಶ ಕಡಿಮೆ ಇವೆ. ಈ ಖಾಸಗೀ ಶಾಲೆಗಳಲ್ಲಿ ಹೆಚ್ಚು ಫಲತಾಂಶ ಬರುವುದಕ್ಕೆ ಕಾರಣ ಆ ಶಾಲೆಗಳನ್ನು ಅವರೇ ಸ್ವಂತವಾಗಿ ನಿಂತು ನಡೆಸುತ್ತಿದ್ದಾರಲ್ಲದೆ ಅವರಿಗೆ ಲಾಭದ ದೃಷ್ಟಿಯಿಂದಲೋ ಅಥವಾ ಅವರಿಗೆ ಹೆದರಿಕೆ ಬೆದರಿಕೆ ಹಾಕಿರುವುದರಿಂದಲೋ ನಮ್ಮ ಕೆಲಸ ಎಲ್ಲಿ ಹೋಗುತ್ತದೋ ಎನ್ನುವ ದೃಷ್ಟಿಯಿಂದಲೋ ಅದರಲ್ಲಿ ಫಲತಾಂಶ ಚೆನ್ನಾಗಿ ಬರುತ್ತದೆ. ಸರ್ಕಾರೀ ಶಾಲೆಗಳಲ್ಲೂ ಕೂಡ ಈ ರೀತಿ ಹೆದರಿಕೆ ಬೆದರಿಕೆ ಹಾಕುವುದರ ಜೊತೆಗೆ ಒಂದಕ್ಕೊಂದು ಪೈಪೋಟಿ ಮಾಡಿಕೊಂಡು ಅವರಿಗೆ ಯಾವುದಾದರೂ ಉತ್ತೇಜನ ಕೊಟ್ಟು ಹೆಚ್ಚು ಫಲತಾಂಶ ಬರುವಂತೆ ಮಾಡುತ್ತೀರಾ ? ಎಲ್ಲಿಯವರೆಗೆ ಅವರಿಗೆ ಒಂದು ಉತ್ತೇಜನ ಕೊಟ್ಟು ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೂ ಇದರಲ್ಲಿ ಫಲತಾಂಶ ಕಡಿಮೆ ಬರುತ್ತದೆ. ಆದುದರಿಂದ ಈ ಬಗ್ಗೆ ಒಂದು ಯೋಜನೆ ಹಾಕಿಕೊಂಡು ಕೆಲಸ ಮಾಡಿದರೆ ಅನುಕೂಲವಾಗುವುದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಒಳ್ಳೆಯ ಸಲಹೆ ಪರಿಶೀಲನೆ ಮಾಡಬೇಕಾಗುತ್ತದೆ. ಈಗ ನಧ್ಯದಲ್ಲಿ ಅಂಥಾ ಯೋಜನೆ ಯಾವುದೂ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಸರ್ಕಾರದಿಂದ ಸಾಕಷ್ಟು ಹಣ ವಿದ್ಯಾ ಇಲಾಖೆಗೆ ಖರ್ಚಾಗುತ್ತಿದೆ. ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪರೀಕ್ಷೆ ಆದಮೇಲೆ ಅವರಿಗೆ ತಮ್ಮ ಜೀವನವನ್ನು ನಡೆಸಿಕೊಂಡು ಹೋಗಲು ಕಷ್ಟವಾಗುತ್ತಿದೆ. ಆದುದರಿಂದ ಅವರ ಕೆರಿಯರ್ ಬಗ್ಗೆ ತಮ್ಮ ಒಂದು ಮುಂದಿನ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುವಂಥಾ ಸೆಲೆಕ್ಷನ್ ಟೆಸ್ಟ್ ಮತ್ತು ಕೈರಿಯರ್ ಟೆಸ್ಟ್ ಅನ್ನುವ ಒಂದು ಪರೀಕ್ಷೆ ಇಟ್ಟರೆ ಅವರಿಗೆ ಅನುಕೂಲವಾಗುವುದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಒಳ್ಳೆಯ ಸಲಹೆ.